ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **540/2015** ಸಿ.ಡಬ್ಲೂ **02,** ಪಿ.ಡಬ್ಲೂ **02**

| | | |
|---|---|---|
| ಸಾಕ್ಷಿಯ ಹೆಸರು | - ಮಹಲಿಂಗಪ್ಪ | ದಿನಾಂಕ 11-04-2023 |
| ತಂದೆಯ ಹೆಸರು | - ನೀಂಗಪ್ಪ | ರಂದು ಪ್ರಮಾಣ ವಚನ |
| ವಯಸ್ಸು | - 32 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಖಾಸಗಿ ಕಂಪನಿಯ ನೌಕರ | |
| ವಾಸ ಸ್ಥಳ | - ತೋರಣಗಲ್ಲ ಗ್ರಾಮ | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಚಾಸಾ 1 ನನ್ನ ತಾಯಿ. ನನ್ನ ತಂದೆಯವರು ತೀರಿಹೋಗಿದ್ದು ನಾನು ನನ್ನ ತಾಯಿ ಮತ್ತು ನನ್ನ ತಮ್ಮ ತೋರಣಗಲ್ಲ ಗ್ರಾಮದಲ್ಲಿ ವಾಸವಾಗಿರುತ್ತೇವೆ. ಸುಮಾರು 8 ವರ್ಷಗಳ ಹಿಂದೆ ಚಾಸಾ 1 ರವರು ತಮ್ಮ ತವರು ಮನೆ ಮಾವಿನಹಳ್ಳಿ ಗ್ರಾಮಕ್ಕೆ ಹೋದಾಗ ಮನೆಯಲ್ಲಿ ನಾನು ಮತ್ತು ನನ್ನ ತಮ್ಮ ಇದ್ದೆವು. ಸುಮಾರು 8 ವರ್ಷಗಳ ಹಿಂದೆ ರಾತ್ರಿ 8.30 ಗಂಟೆಗೆ ನಾನು ಮನೆ ಬೀಗ ಹಾಕಿಕೊಂಡು ಜೀಂದಾಲ ಕೆಲಸಕ್ಕೆ ಹೋಗಿದ್ದು ಬೆಳ್ಳಿಗ್ಗೆ 11.30 ಗಂಟೆಗೆ ಮನೆಗೆ ಬಂದಾಗ ಮನೆಯ ಬಾಗಿಲು ತೆಗೆದಿದ್ದು ಕಂಡು ಬಂತು. ಮನೆ ಒಳಗೆ ಹೋಗಿ ನೋಡಿದಾಗ ಬೀರೊದಲ್ಲಿ ಇಟ್ಟಿದ್ದ ಒಂದು ತೋಲೆಯ ಬಂಗಾರದ ಕಠಾಣಿ ಸರ ಮತ್ತು 2 ತೋಲೆಯ ಬಂಗಾರದ ಸರ ಯಾರೊ ಕಳ್ಳತನ ಮಾಡಿ ಹೋಗಿದ್ದರು. ನಾನು ಸದರಿ ವಿಷಯವನ್ನು ಚಾಸಾ 1 ರವರಿಗೆ ದೂರವಾಣಿ ಕರೆ ಮಾಡಿ ಮನೆಯಲ್ಲಿ ಕಳ್ಳತನ ಆಗಿರುವ ವಿಷಯ ತಿಳಿಸಿರುತ್ತೇನೆ. ಅವರು ಬಂದ ನಂತರ ಸಂಬಂಧಿಕರ ಜೊತೆ ಚರ್ಚಿಸಿ ಠಾಣೆಯಲ್ಲಿ ದೂರು ನೀಡಿರುತ್ತಾರೆ. ನಾನು ಪೋಲಿಸರಿಗೆ ಈ ವಿಚಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆ. ಸುಮಾರು 6 ತಿಂಗಳ ನಂತರ ನಮ್ಮ ಮನೆಯಲ್ಲಿ ಕಳ್ಳತನವಾದ ಕಠಾಣಿ ಸರವನ್ನು ಪೋಲಿಸ ಠಾಣೆಯಲ್ಲಿ ಗುರುತಿಸಿರುತ್ತೇನೆ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಆರೋಪಿತರನ್ನು ತೋರಿಸಿರುವುದಿಲ್ಲ.

**ಪಾಟೀ ಸವಾಲು**: **ಆರೋಪಿ ಪರ ಶ್ರೀ ಎಸ್ ಯು ಎಸ್ ವಕೀಲರಿಂದ**.

ನಾನು ಪೋಲಿಸರ ಮುಂದೆ ಯಾವುದೆ ಹೇಳಿಕೆಯನ್ನು ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**

## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **540/2015** ಸಿ.ಡಬ್ಲೂ **01,** ಪಿ.ಡಬ್ಲೂ **01**

ಸಾಕ್ಷಿಯ ಹೆಸರು - ಮಲಿಯಮ್ಮ
ಗಂಡನ ಹೆಸರು - ನೀಂಗಪ್ಪ
ವಯಸ್ಸು - 45 ವರ್ಷ
ಉದ್ಯೋಗ - ಕೂಲಿ ಕೆಲಸ
ವಾಸ ಸ್ಥಳ - ತೋರಣಗಲ್ಲ ಗ್ರಾಮ

ದಿನಾಂಕ 11-04-2023 ರಂದು ಪ್ರಮಾಣ ವಚನ ಮಾಡಿಸಲಾಯಿತು.

### ಮುಖ್ಯ ವಿಚಾರಣೆ ಸಸಅ ರವರಿಂದ

* * * *

ಚಾಸಾ 2 ನನ್ನ ಮಗ. ನನ್ನ ಗಂಡ ತೀರಿಹೋಗಿದ್ದು ನಾನು ನನ್ನ ಮಕ್ಕಳು ತೋರಣಗಲ್ಲ ಗ್ರಾಮದಲ್ಲಿ ವಾಸವಾಗಿರುತ್ತೇವೆ. ಸುಮಾರು 8 ವರ್ಷಗಳ ಹಿಂದೆ ನಾನು ನನ್ನ ತವರು ಮನೆ ಮಾವಿನಹಳ್ಳಿ ಗ್ರಾಮಕ್ಕೆ ಹೋದಾಗ ಮನೆಯಲ್ಲಿ ಚಾಸಾ 2 ಮತ್ತು ನನ್ನ ಮತ್ತೊಬ್ಬ ಮಗ ಇದ್ದರು. ಚಾಸಾ 2 ರವರು ನನಗೆ ದೂರವಾಣಿ ಕರೆ ಮಾಡಿ ಮನೆಯಲ್ಲಿ ಕಳ್ಳತನ ಆಗಿರುವ ವಿಷಯ ತಿಳಿಸಿದನು. ನಾನು ಮಾವಿನ ಹಳ್ಳಿಯಿಂದ ತೋರಣಗಲ್ಲಗೆ ಬಂದು ಚಾಸಾ 2 ರವರಿಗೆ ವಿಚಾರಿಸಿದಾಗ ಸದರಿ ದಿನದ ಹಿಂದಿನ ದಿನ ರಾತ್ರಿ 8.30 ಗಂಟೆಗೆ ನಾನು ಮನೆ ಬೀಗ ಹಾಕಿಕೊಂಡು ಜೀಂದಾಲ ಕೆಲಸಕ್ಕೆ ಹೋಗಿದ್ದು ಬೆಳ್ಳಿಗ್ಗೆ 11.30 ಗಂಟೆಗೆ ಮನೆಗೆ ಬಂದಾಗ ಮನೆಯ ಬಾಗಿಲು ತೆಗೆದಿದ್ದು ಕಂಡು ಬಂತು. ಮನೆ ಒಳಗೆ ಹೋಗಿ ನೋಡಿದಾಗ ಬೀರೊದಲ್ಲಿ ಇಟ್ಟಿದ್ದ ಒಂದು ತೋಲೆಯ ಬಂಗಾರದ ಕಠಾಣಿ ಸರ ಮತ್ತು 2 ತೋಲೆಯ ಬಂಗಾರದ ಸರ ಯಾರೊ ಕಳ್ಳತನ ಮಾಡಿ ಹೋಗಿದ್ದಾರೆ ಎಂದು ತಿಳಿಸಿದನು. ನಂತರ ನಾನು ಸಂಬಂಧಿಕರ ಜೊತೆ ಚರ್ಚಿಸಿ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಪೋಲಿಸರು ನಮ್ಮ ಮನೆಯ ಹತ್ತಿರ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಸುಮಾರು 6 ತಿಂಗಳ ನಂತರ ನಮ್ಮ ಮನೆಯಲ್ಲಿ ಕಳ್ಳತನವಾದ ಕಠಾಣಿ ಸರವನ್ನು ಪೋಲಿಸರು ಠಾಣೆಯಲ್ಲಿ ಗುರುತಿಸಿರುತ್ತೇನೆ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ

ಗೊತ್ತಿರುವುದಿಲ್ಲ. ಪೋಲಿಸರು ಆರೋಪಿತರನ್ನು ತೋರಿಸಿರುವುದಿಲ್ಲ. ಕಠಾಣಿ ಸರವನ್ನು ನೋಡಿದರೆ ಗುರುತಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಿ ಸಮಯಾವಕಾಶವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**